Let us see. Upa Lok Ayukta is the real competent authority to look into these things. We have strengthened that organisation. They are already on the job to find out many of the corrupt officers. They are doing wonderful things. I don't think.....

SRI R.V. DESHPANDE: There is a racket.

SRI M. VEERAPPA MOILY: We will burst that racket. You don't worry. Any racket either in this drug manufacturing or any other thing in which they are playing with the life of the people, I will see that it is exploded once and for all. ಅದನ್ನು ಮೂಲೋಚ್ಚಾಟನೆ ಮಾಡತಕ್ಕಂಥ ಕೆಲಸವನ್ನು ಮಾಡಬೇಕು. You leave it to me.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಏನು ಸಲಹೆ ಮಾಡಿದೆನೆಂದರೆ, ಮಾನ್ಯ ಮುಖ್ಯಮಂತ್ರಿಗಳೇ ನಿಮ್ಮ ಹತ್ತಿರ ಆರೋಗ್ಯ ಇಲಾಖೆ ಇದೆ. ಆದುದರಿಂದ, ದಯಮಾಡಿ ನಿಮಗೆ ಸಮಯ ಸಿಕ್ಕಿದಾಗ ಕಳೆದ 15-20 ವರ್ಷಗಳ ರೆಕಾರ್ಡ್ ತೆಗೆಯಿರಿ....

SRI M. VEERAPPA MOILY: I am telling. I wanted to tell that. I forgot it. We have already had number of sittings. ಬಹಳ ಮಾತುಕತೆಯಾಡಿ ಯಾರು ಇದರ ಬಗ್ಗೆ ಅನಾವಶ್ಯಕವಾದಂಥ ದುರ್ಲಾಭ ಪಡೆಯತಕ್ಕಂಥ, ರಾಕೆಟ್ ಮಾಡತಕ್ಕಂಥಾದ್ದು ಮತ್ತು ಸರಿಯಾದ ಮೆಡಿಸಿನ್, ಡ್ರಗ್ಸ್, ಕೊಡದಿರುವಂಥ ಪರಿಸ್ಥಿತಿಯನ್ನು ನಿಲ್ಲಿಸಬೇಕೆಂದು ಈಗಾಗಲೇ ಪರ್ಚೇಸ್ ಪಾಲಿಸಿಯನ್ನು ನಾವು ಬದಲಾವಣೆ ಮಾಡುತ್ತಿದ್ದೇವೆ. ಇದು ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಕೂಡ ಗೊತ್ತಿದೆ, ತಾವು ಕೂಡ ಸರ್ಕಾರದಲ್ಲಿದ್ದೀರಿ. ನಾವು ಅನೇಕ ಬಾರಿ ತಪ್ಪು ಮಾಡುವುದಕ್ಕೆ ಅವಕಾಶ ಕೊಡುವುದು, ಆ ಸಿಸ್ಟಮ್ ಹೇಗಿರುತ್ತದೆಂದರೆ, ಎಲ್ಲರೂ ದರೋಡೆ ಮಾಡಿಕೊಂಡು ಹೋಗತಕ್ಕಂಥ ಸಿಸ್ಟಮ್ ಅನ್ನು ನಾವು ಅಡಾಪ್ಟ್ ಮಾಡಿದ್ದೇವೆ. ಆ ಸಿಸ್ಟಮ್‌ಗೆ ನಾವು ಬದಲಾವಣೆ ಮಾಡಿದರೆ ಮಾತ್ರ ಇಂತಹ ಅವ್ಯವಹಾರಗಳನ್ನು ನಿಲಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, We are thoroughly changing the purchase policy. ಈ ವ್ಯವಸ್ಥೆಯಲ್ಲಿ ಸರಿಯಾದ, ನಿಸ್ಪೃಹವಾದಂಥ ಒಂದು ಪದ್ಧತಿಯನ್ನು ಮಾಡಿದಾಗ ಈ ಎಲ್ಲಾ ಹೆಗ್ಗಣಗಳು ಒಳಗಡೆ ಪ್ರವೇಶಿಸುವುದಕ್ಕೆ ಅವಕಾಶವಿರುವುದಿಲ್ಲ. ಆದುದರಿಂದ, ಈ ಬಗ್ಗೆ ನಾವು ಒಂದು Separate purchase policy, ಮಾಡಿ we are going to evolve it shortly.

ವಿಷಯ(2) ಪುಲವಳ್ಳಿ ಗ್ರಾಮದ ಇನಾಂತಿ ಜಮೀನಿನ ಬಗ್ಗೆ

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್(ಕಿತ್ತೂರು):- ಸನ್ಮಾನ್ಯ ಅಧ್ಯಕ್ಷರೆ, ಬೈಲಹೊಂಗಲ ತಾಲ್ಲೂಕಿನ ಪುಲವಳ್ಳಿ ಗ್ರಾಮದಲ್ಲಿ ಸುಮಾರು 11 ಸಾವಿರ ಎಕರೆ ಜಮೀನಿಗೆ ಸಂಬಂಧಿಸಿದಂತೆ ನಾನು ದಿನಾಂಕ 5.9.91 ರಂದು ಒಂದು ಪ್ರಶ್ನೆ ಕೇಳಿದ್ದೆ. ಈ ಬಗ್ಗೆ ನಾನು ಸ್ವಲ್ಪ ವಿವರಣೆ ಕೊಡಬೇಕಾಗುತ್ತದೆ. ಸಂಗೊಳ್ಳಿ ರಾಯಣ್ಣನನ್ನು ಹಿಡಿದು ಕೊಟ್ಟಿದ್ದಕ್ಕೆ ಕೊಲ್ಲಾಪುರ ಮತ್ತು ನೇಗಿನಹಾಳ ಗ್ರಾಮದ ಇನಾಮದಾರರಿಗೆ ಬಹುಮಾನವಾಗಿ ಕೊಟ್ಟಂಥ ಜಮೀನು ಇದಾಗಿದೆ. ಅದರ ಪೈಕಿ 11 ಸಾವಿರ ಎಕರೆ ಜಮೀನು ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪುಲವಳ್ಳಿ ಗ್ರಾಮದಲ್ಲಿದೆ. ಈ ಜಮೀನಿನದು ಬಹಳ ದೊಡ್ಡ ಕಥೆಯಾಗಿದೆ. ಆ ಇನಾಮದಾರರು ಈ ಜಮೀನನ್ನು ಸಾವಿರಾರು ಕುಟುಂಬಗಳಿಗೆ ಕೊಟ್ಟಿದ್ದರು. ಅನಂತರ 1955ನೇ ಇಸವಿಯಲ್ಲಿ ಇಂಡಿಯನ್ ಫಾರೆಸ್ಟ್ ಆಕ್ಟ್‌ನ ಸೆಕ್ಷನ್ 35ರಡಿಯಂತೆ, ಈ ಜಮೀನು ಫಾರೆಸ್ಟ್ ಎಂದು ಬರಬೇಕು, ಆದರೆ, ಜಮೀನುಗಳಿಗೆ ರೈತರ ಹೆಸರುಗಳನ್ನು ನಮೂದಿಸಲಿಲ್ಲ. ಅನಂತರ, ಇನಾಮದಾರರು ಕೋರ್ಟಿಗೆ ಹೋದರು. ಕೋರ್ಟಿನಲ್ಲಿ ಆ ಜಮೀನು ಇನಾಮದಾರರ ಪರವಾಯಿತು. 'ನೀವು ವೆಜಿಟೇಷನ್ ಮ್ಯಾನೇಜ್ ಮೆಂಟ್ ಅನ್ನು ವಹಿಸಿಕೊಳ್ಳಬಹುದೇ ಹೊರತು ಓನರ್ ಶಿಪ್

ಬದಲಾವೆ ಮಾಡಿಕೊಳ್ಳಲಾಗುವುದಿಲ್ಲ' ಎನ್ನುವ ಕೋರ್ಟ್ ಆರ್ಡರ್ ಆದನಂತರ, ಇವೊತ್ತು ಆ ರೈತರುಗಳಿಗೆ ಯಾವುದೇ ಆಧಾರವಿಲ್ಲ. ಆ ಜಮೀನಿನಲ್ಲಿ ಸುಮಾರು ಸಾವಿರಾರು ಕುಟುಂಬಗಳು 40 ವರ್ಷಗಳಿಂದ ಉಳುಮೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇನಾಮದಾರರಿಗೆ ಕೆಲವರು ಇವೊತ್ತಿಗೂ ಕೊಡುತ್ತಿದ್ದಾರೆ. ಒಂದು ಎಕರೆಗೆ 100-200 ಎಂದು ಮೊದಲಿತ್ತು, ಇವೊತ್ತು ಎಕರೆಗೆ 500 ಕೊಡಬೇಕೆಂದು ಹೇಳುತ್ತಿದ್ದಾರೆ. ಎಷ್ಟು ದಿವಸಗಳ ಇದೇ ರೀತಿ ಕೊಡಬೇಕು? ಎಂಬ ಚಿಂತೆಯಲ್ಲಿದ್ದಾರೆ. ಈ ಬಗ್ಗೆ ನಾನು ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳಿದ ನಂತರ, 'ಆ ಜಮೀನು ರೈತರಿಗೆ ಸಿಗುವಂಥ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ' ಎಂದು ಸರ್ಕಾರ ಉತ್ತರ ಕೊಟ್ಟಿತು. ಆದರೆ, ಇಲ್ಲಿಯವರೆವಿಗೂ ಸರ್ಕಾರ ಪ್ರಯತ್ನ ಮಾಡಿಲ್ಲ. ಈಗ ಇನಾಮದಾರರು ಅವರನ್ನು ಒಕ್ಕಲೆಬ್ಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನನ್ನ ಪ್ರಶ್ನೆಯೇನೆಂದರೆ, ಆ ಜಮೀನಿನಲ್ಲಿ ಯಾರು ಸಾಗುವಳಿ ಮಾಡುತ್ತಿದ್ದಾರೆ, ಅವರ ಒಂದು ಪಟ್ಟಿಯನ್ನಾದರೂ ಮಾಡಿ ನಮಗೆ ಒದಗಿಸುತ್ತೀರಾ, ಹೇಗೆ?

ಲ್ಯಾಂಡ್ ರಿಫಾರ್ಮ್ ಆಕ್ಟ್ ಕೆಳಗೆ ಉಳುವವನೇ ಭೂಮಿಯ 'ಒಡೆಯ' ಎನ್ನುವುದು ನಮ್ಮ ಭಗವದ್ಗೀತೆ ಎಂದು ಹೇಳುತ್ತೀರಿ, ಆದರೆ ಅಲ್ಲಿ 40 ವರ್ಷಗಳಿಂದಲೂ ಸಾಗುವಳಿ ಮಾಡಿಕೊಂಡು ಬಂದಿರತಕ್ಕವರನ್ನು ಗುಳಿಬ್ಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅವರಿಗೆ ಬದುಕಲು ಯಾವ ರೀತಿಯಲ್ಲಿ ರಕ್ಷಣೆಯನ್ನು ಕೊಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್:- ಕಿತ್ತೂರು ರಾಣಿ ಚೆನ್ನಮ್ಮನ ಬಲಗೈ ಭಂಟನಾಗಿದ್ದ ಸಂಗೊಳ್ಳಿ ರಾಯಣ್ಣನನ್ನು ಇಂಗ್ಲೀಷ್‌ನವರಿಗೆ ಹಿಡಿದುಕೊಟ್ಟಂಥ ವಂಶಸ್ಥರಿಗೆ ಆ ಸಂದರ್ಭದಲ್ಲಿ ಜಮೀನನ್ನು ಇನಾಮ್ತಿಯಾಗಿ ಕೊಟ್ಟಿದ್ದರು. ಆ ಇನಾಮ್ತಿದಾರರುಗಳು ಅವರದೇ ಆದಂಥ ವ್ಯವಸ್ಥೆಯನ್ನು ಮಾಡಿಕೊಂಡು ಅಲ್ಲಿ ಉಳುಮೆಮಾಡತಕ್ಕ ರೈತರನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ಇನ್ನೂ ಸಹ ಅವರ ಇನಾಮ್ತಿ, ಪಾಳ್ಳೇಗಾರಿಕೆ, ಆ ಕಿತ್ತೂರು ರಾಣಿ ಪ್ರಾಂತ್ಯದಲ್ಲಿ ಹೋಗಿಲ್ಲ. ಆದ್ದರಿಂದ ಅದರ ಬಗ್ಗೆ ವೈಯಕ್ತಿಕವಾದ ಮಾಹಿತಿಯನ್ನು ತರಿಸಿಕೊಂಡು ನೋಡಬೇಕು. ಮತ್ತು ದಯಮಾಡಿ ತಾವು ಒಮ್ಮೆ ಕಿತ್ತೂರು ಚೆನ್ನಮ್ಮನ ಸ್ಥಳಕ್ಕೆ ಬಂದು ಅಲ್ಲಿನ ಪರಿಸ್ಥಿತಿಯನ್ನು ಅಧಿಕಾರಿಗಳು ಮತ್ತು ಮುಖಂಡರನ್ನು ಕರೆದು ನೋಡಬೇಕು. ಈ ರೀತಿ ರೈತರನ್ನು ಒಕ್ಕಲೆಬ್ಬಿಸುವ ಕೆಲಸವನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಾಬಾಗೌಡ ಪಾಟೀಲ್:- ತಾವು ಕೊನೆಯ ಪಕ್ಷ ಡೆಪ್ಯೂಟಿ ಕಮಿಷನರ್‌ರವರಿಂದ ಈ ರೀತಿ ಯಾರ್ಯಾರು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ ಅದರ ಬಗ್ಗೆ ಒಂದು ಪಟ್ಟಿಯನ್ನು ಮಾಡಿ ನಮಗೆ ಕೊಟ್ಟರೆ ಸಾಕು.

ಶ್ರೀ ಎಂ. ರಾಜಶೇಖರ ಮೂರ್ತಿ:- ಇದರ ಬಗ್ಗೆ ವರದಿಯನ್ನು ತರಿಸಿ ಏನು ಕ್ರಮ ಮಾಡಬೇಕೋ ಅದನ್ನು ಮಾಡುತ್ತೇನೆ.

ಶ್ರೀ ಬಾಬಾಗೌಡ ಪಾಟೀಲ್:- ಅಲ್ಲಿ ಸಾವಿರಾರು ಕುಟುಂಬಗಳು ಇವೆ, ಎಂದು ಮಾಡಿ ಮುಗಿಸುತ್ತೀರಿ? ಪೋಲೀಸ್‌ನವರು ಇನಾಮ್‌ದಾರರ ಮಾತನ್ನು ಕೇಳಿ ದುಡ್ಡು ಕೊಡಲಿಲ್ಲವೆಂದು ಗುಳ್ಳಿಬ್ಬಿಸಿ ಬಿಡುತ್ತಾರೆ. ಆ ಕಾರಣ ಸ್ವಲ್ಪ list ಮಾಡಿಸಿದರೆ ಚೆನ್ನಾಗಿರುತ್ತದೆ.

Sri. M. Rajashekhara Murthy:- Status quo ಮೈಂಟೇನ್ ಮಾಡಿ disturb ಮಾಡಬೇಡಿ ಎಂದು ಹೇಳುತ್ತೇನೆ.

ವಿಷಯ(3) ಅಫ್ಜಲ್‌ಪುರ ಮತ ಕ್ಷೇತ್ರದಲ್ಲಿ ಕಗ್ಗೊಲೆಗಳ ಪ್ರಸ್ತಾಪ

ಶ್ರೀ ಆರ್.ವಿ. ದೇಶಪಾಂಡೆ:- ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಿಬೇಕೆಂದು ನಾನು ತಮ್ಮ ಅನುಮತಿಯನ್ನು ಪಡೆದುಕೊಂಡಿದ್ದೆ. ಅದೇನೆಂದರೆ, ಗುಲ್ಬರ್ಗಾ ಜಿಲ್ಲೆಯ ಅಫ್ಜಲ್‌ಪುರ ಮತದಾರರ